# ನಮ್ಮವನೇ ಅನಿಸುವ ಶಿಕಾರಿಯ ನಾಗಪ್ಪ



**ಆನಂದ್ ಋಗ್ವೇದಿ**
ಕಲೆ: ರೂಪಶ್ರೀ ಕಲ್ಲಿಗನೂರು

ಪ್ರೊ. ನಾಗನಾಥ ಎಂದರೆ ಬಹುತೇಕರಿಗೆ ನೆನಪಾಗಲಿಕ್ಕಿಲ್ಲ. ಹನೇಹಳ್ಳಿಯ ನಾಗನಾಥ ಉರುಫ್ ನಾಗಪ್ಪ ಎಂದರೆ ಒಂದಷ್ಟು ಜನರಿಗೆ ನೆನಪಾಗಬಹುದು, ಕೆಲವರು ಊಹಿಸಬಹುದು. ಯಶವಂತ ಚಿತ್ತಾಲರ ‘ಶಿಕಾರಿ’ ಕಾದಂಬರಿಯ ನಾಗಪ್ಪ ಎಂದರೆ ಸಾಹಿತ್ಯ ಓದುಗ ವಲಯದಲ್ಲಿ ನೆನಪುಗಳ ಮೆರವಣಿಗೆಯೇ ಹೊರಡಬಹುದು!

ಮೆರವಣಿಗೆ ಎಂದೆ ನಾನು. ನಿಜಕ್ಕೂ ಅದು ನೆನಪುಗಳ ಮೆರವಣಿಗೆಯೇ. ಸಾಹಿತ್ಯದ ‘ನವ್ಯ’ ಕಾಲ ಪ್ರವರ್ಧಮಾನವಾಗಿದ್ದ ಸಂದರ್ಭದಲ್ಲಿ ನವ್ಯವು ಕಾಮಕೇಂದ್ರಿತ ಎಂಬ ಅಭಿಮತವಿದ್ದಾಗ ಮನುಷ್ಯನ ಮನೋಪಾತಳಿಯ ಏರಿಳಿತಗಳ ಬಗ್ಗೆ ಯಶವಂತ ಚಿತ್ತಾಲರು ‘ಶಿಕಾರಿ’(1979) ಕಾದಂಬರಿ ಬರೆದಾಗ ಅದನ್ನು ಓದದೇ ಇದ್ದವರೇ ಇರಲಿಕ್ಕಿಲ್ಲ. ಎಂಭತ್ತರ ದಶಕದುದ್ದಕ್ಕೂ ಅದರ ಬಗ್ಗೆ ವಿಮರ್ಶೆ ಚರ್ಚೆಗಳು ಅವ್ಯಾಹತವಾಗಿ ನಡೆದಿದ್ದವು. ಆ ನವ್ಯದ ಏರುಜವ್ವನ ಕಾಲ ಇಳಿದು ದಲಿತ ಮತ್ತು ಬಂಡಾಯ ಸಾಹಿತ್ಯದ ಆಶಯಗಳು ಮುನ್ನೆಲೆಗೆ ಬಂದು ಓದುಗರನ್ನು ಮನೋಲೋಕದಿಂದ ಹೊರ ಜಗತ್ತಿನ ತಲ್ಲಣಗಳಿಗೆ ಮುಖಾಮುಖಿಯಾಗಿಸಿದ ಹೊತ್ತು - ನಾನು ಚಿತ್ತಾಲರ 'ಶಿಕಾರಿ' ಕಾದಂಬರಿಯನ್ನು ಓದಿದ್ದು. ಆಗಲೇ ನಾಗಪ್ಪನ ಪಾತ್ರ ಮನಸ್ಸಿನಲ್ಲಿ ಚಿತ್ರಬರೆದಂತೆ ಕುಳಿತಿದ್ದು.

ಉತ್ತರ ಕನ್ನಡದ ಹನೇಹಳ್ಳಿಯಲ್ಲಿ ಹುಟ್ಟಿ, ಕರಾವಳಿಯ ಬಹುತೇಕ ನಿವಾಸಿಗಳಂತೆ ಮುಂಬಯಿ ನಗರ ಸೇರುವ ಕನಸು ಕಂಡ ನಾಗಪ್ಪ ಯಾನೆ ನಾಗನಾಥನ ಪಾತ್ರಚಿತ್ರಣವನ್ನು ಗಮನಿಸಿದರೆ, ಅದು ಎಲ್ಲಾ ಗ್ರಾಮೀಣ ಮಧ್ಯಮ ವರ್ಗದ ಕನಸುಗಾರರ ಪ್ರಾತಿನಿಧಿಕ ಪಾತ್ರ ಎಂದೆನಿಸುತ್ತದೆ. ಆತ ಮುಂಬಯಿ ಸೇರುವ ಮುನ್ನ ತನ್ನೂರಿನಲ್ಲಿ ಅನುಭವಿಸಿದ ರೂಕ್ಷ ಬಾಲ್ಯ, ಹೆತ್ತ ತಂದೆಯೇ ಮಗನಿಗೆ ಬೆಂಕಿ ಹಚ್ಚಿದ ಕ್ರೂರ ನೆನಪು, ಅದನ್ನು ಮರೆಯೋಣವೆಂದರೂ, ಅದರ ನೆನಪಿಗೆಂಬಂತೆ ಎದೆಯ ಮೇಲಿರುವ ಸುಟ್ಟಗಾಯದ ಗುರುತು, ಎದೆಯಲ್ಲಿ ಆಗಾಗ ಭಗ್ ಎಂದು ಹೊಮ್ಮುವ ಬೆಂಕಿ ಮತ್ತು ಕಥೆ ಬರೆಯುವ ಅವನ ಸಂವೇದನಾತ್ಮಕ ಮನೋಭಾವ– ಇವೆಲ್ಲವೂ ಅಚ್ಚರಿ ಮೂಡಿಸುತ್ತದೆ. ಈ ಪಾತ್ರಚಿತ್ರಣವೇ ಅವನನ್ನು ಮತ್ತಷ್ಟು ಪರಿಚಿತ ಮತ್ತು ಆಪ್ತ ಎಂದೆನ್ನಿಸುವಂತೆ ಮಾಡುತ್ತದೆ.

ಮುಂಬಯಿಯ ಖೇತವಾಡಿಯ ಒಂದು ಕಂಪನಿಯ ಆರ್ ಅಂಡ್ ಡಿ ವಿಭಾಗದಲ್ಲಿ ವೈಜ್ಞಾನಿಕ ಕೆಲಸಗಾರನಾಗಿ ನಾಗಪ್ಪ ವೃತ್ತಿ ಆರಂಭಿಸುತ್ತಾನೆ. ಆದರೆ ಅವನು ಎದುರಿಸುವ ಔದ್ಯೋಗಿಕ ಬಿಕ್ಕಟ್ಟಿನದ್ದು ಒಂದು ಆಯಾಮವಾದರೆ, ಯಜಮಾನಿಕೆಯ ಡಿ.ಎಂ.ಡಿ. ಬಂದೂಕುವಾಲ, ಸೌಶೀರ್ ಪಟೇಲ್, ಸರೀಕ ಸ್ನೇಹಿತ ಹನೇಹಳ್ಳಿಯ ಶ್ರೀನಿವಾಸ, ದಸ್ತೂರ್, ಪತ್ರಕರ್ತ ಅರ್ಜುನ್ ರಾವ್, ಆಫೀಸಿನ ಮೇರಿ, ವಿಮಾನ ಪರಿಚಾರಿಕೆ ಥ್ರೀಟಿ ಇರಾನಿ, ಟೆಲಿಫೋನ್ ಆಪರೇಟರ್